**ಅರಸೀಕೆರೆ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯದಲ್ಲಿ**
**ಸಿ.ಸಿ. ನಂಃ 216/20**

| | | | |
|---|---|---|---|
| ಸಾಕ್ಷಿದಾರರ ಹೆಸರು | ಮಂಜೇಗೌಡ | ಸಿ.ಡಬ್ಲ್ಯೂ- | 2 |
| ತಂದೆ/ಗಂಡನ ಹೆಸರು | ನೀಲೇಗೌಡ | ಪಿ.ಡಬ್ಲ್ಯೂ | 1 |
| ವಯಸ್ಸು | 59 ವರ್ಷ | ಪ್ರಮಾಣ ವಚನ ಭೋಧಿಸಿದ ದಿನಾಂಕ | |
| ವೃತ್ತಿ | ಹೆಚ್.ಸಿ. ನಗರ ಪೋಲೀಸ್ ಠಾಣೆ | | |
| ವಾಸ | ಅರಸೀಕೆರೆ | 13.12.2023 | |

**ಮುಖ್ಯ ವಿಚಾರಣೆ ಸಸಅ ರವರಿಂದಃ-**

ನಾನು 2017 ಜುಲೈ ನಿಂದ ಇಲ್ಲಿಯವರೆಗೆ ಅರಸೀಕೆರೆ ನಗರ ಪೋಲೀಸ್ ಠಾಣೆಯಲ್ಲಿ ಹೆಚ್.ಸಿ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ30-12-2019 ರಂದು ನಮ್ಮ ಠಾಣಾ ಪಿ.ಐ ರವರು ನನ್ನನ್ನು ಹಾಗೂ ಚಾಸಾ-1 ಇವರನ್ನು ನಮ್ಮ ಠಾಣಾ ಅಪರಾಧ ಪ್ರಕರಣಗಳನ್ನು ತನಿಖೆ ಮಾಡಲು ನೇಮಕ ಮಾಡಿರುತ್ತಾರೆ. ಅದೇ ಪ್ರಕಾರ ನಾವು ಬಸ್ ಸ್ಟಾಂಡ್, ರೈಲ್ವೆ ಸ್ಟೇಷನ್, ಸಾಯಿನಾಥ ರಸ್ತೆ ಕಡೆ ಗಸ್ತನ್ನು ಮುಗಿಸಿಕೊಂಡು ಸಂಜೆ 5-30 ಗಂಟೆ ಸಮಯದಲ್ಲಿ ಹಾಸನ ರಸ್ತೆಯಲ್ಲಿ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಳಿ ಗಸ್ತು ಮಾಡುತ್ತಿದ್ದಾಗ ಇಬ್ಬರು ವ್ಯಕ್ತಿಗಳು ಒಂದು ಬೈಕ್ ನಲ್ಲಿ ಕಂತೇನಹಳ್ಳಿ ದಿಕ್ಕಿನಿಂದ ಬರುತ್ತಿದ್ದರು. ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಅವರು ಬೈಕ್ ನ್ನು ತಿರುಗಿಸಿಕೊಂಡು ಹೋಗಲು ಪ್ರಯತ್ನ ಪಟ್ಟರು. ಅವರ ಈ ನಡವಳಿಕೆ ನೋಡಿ ನಮಗೆ ಅನುಮಾನ ಬಂದು ನೀವು ಮತ್ತು ಚಾಸಾ-1 ಇಬ್ಬರು ವ್ಯಕ್ತಿಗಳನ್ನು ಹಿಡಿದಿರುತ್ತೇವೆ. ಆರೋಪಿತರ ಬೈಕ್ ನಲ್ಲಿ ಕುಳಿತಿರುವ ಜಾಗದ ಮಧ್ಯದಲ್ಲಿ ಒಂದು ಬಿಳಿಯ ಚೀಲ ಕಂಡು ಬಂದಿತು. ನಾವು ಅವರನ್ನು ವಿಚಾರಣೆ ಮಾಡಿದಾಗ ಅವರು ಕಿರಣ ಹಾಗೂ ಸಂತೋಷ ಎಂದು ತಿಳಿದು ಬಂದಿತು. ನಾವು ಚೀಲದಲ್ಲಿ ಏನು ಇದೆ ಎಂದು ಕೇಳಿದಾಗ ಆರೋಪಿತರು ಸಮಂಜಸವಾದ ಉತ್ತರವನ್ನು ಕೊಡದೇ ಇದ್ದಾಗ ನಾವು ಚೀಲ ತೆರೆದು ನೋಡಿರುತ್ತೇವೆ. ಆಗ ಸದರಿ ಚೀಲದಲ್ಲಿ ಗಂಧದ ತುಂಡುಗಳು ಹಾಗೂ ಚೆಕ್ಕೆ ಇರುವುದು ವಾಸನೆಯಿಂದ ಗುರುತು ಹಿಡಿದಿರುತ್ತೇವೆ. ಅಲ್ಲಿ ಸುಮಾರು 7 ಗಂಧದ ತುಂಡುಗಳು ಇದ್ದವು. ಅವುಗಳ ತೂಕ ಸುಮಾರು 4.1 ಕೆ.ಜಿ. ಇತ್ತು. ಆ ನಂತರ ಸದರಿ ವ್ಯಕ್ತಿಗಳನ್ನು ಹಿಡಿದುಕೊಂಡು ನಾವು ಠಾಣೆಗೆ ಬಂದೆವು. ಸದರಿ 2 ಆರೋಪಿತರು ಹೋಗುತ್ತಿದ್ದ ಬೈಕ್ ನ್ನು ಕೂಡ ನಾವು ಹಿಡಿದುಕೊಂಡು ಬಂದಿರುತ್ತೇವೆ. ಸದರಿ ಬೈಕ್ ನಂ. ಕೆಎ-54-ಹೆಚ್.5360 ಆಗಿರುತ್ತದೆ. ಇಬ್ಬರು ಆರೋಪಿತರನ್ನು ನಾವುಗಳು

ಎಸ್.ಹೆಚ್.ಓ. ರವರ ಮುಂದೆ ಹಾಜರುಮಾಡಿರುತ್ತೇವೆ. ಬೈಕ್ ಹಾಗೂ ಜಫ್ತಾದ ಮುದ್ದೆ ಮಾಲುಗಳನ್ನು ಎಸ್.ಹೆಚ್.ಓ. ರವರಿಗೆ ಕೊಟ್ಟಿರುತ್ತೇವೆ. ಆ ನಂತರ ಎಸ್.ಹೆಚ್.ಓ ರವರು ಚಾಸಾ-3 ಹಾಗೂ 4 ಇವರ ಸಮಕ್ಷಮ ಮಹಜರ್ ನ್ನು ಮಾಡಿರುತ್ತಾರೆ. ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಮಹಜರ್ ನ್ನು ಈಗ ನೋಡಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮಹಜರ್ ನ್ನು ಸಂಜೆ 6-30 ರಿಂದ 7-00 ಗಂಟೆಯವರೆಗೆ ಮಾಡಲಾಯಿತು. ನಾನು ಈ ಬಗ್ಗೆ ತನಿಖಾಧಿಕಾರಿಗೆ ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಆ ದಿನ ನಾವು ಹಿಡಿದಂತಹ ವ್ಯಕ್ತಿಗಳನ್ನು ನೋಡಿದರೆ ನಾನು ಗುರುತು ಹಿಡಿಯಬಲ್ಲೆ. ನ್ಯಾಯಾಲಯದ ಮುಂದೆ ಇಂದು ಕಿರಣ ಹಾಜರಿರುತ್ತಾರೆ. ಸಂತೋಷ ಹಾಜರಿಲ್ಲ ಎಂದು ಸಾಕ್ಷಿ ಹೇಳುತ್ತಾರೆ, ಸಂತೋಷನ ಗುರುತಿಗೆ ತಮ್ಮ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಆ ದಿನ ಜಫ್ತಾದ ಬೈಕ್ ಹಾಗೂ ಗಂಧದ ತುಂಡುಗಳ ಫೋಟೋವನ್ನು ಈಗ ನೋಡಿದ್ದು ಅದನ್ನು ನಿಪಿ-2 ಎಂದು ಗುರ್ತಿಸಲಾಯಿತು.

<u>ಪಾಟೀ ಸವಾಲು ಶ್ರೀ ಅರ್.ಎಲ್. ವಕೀಲರಿಂದಃ-</u>

ನನಗೆ ಬೆಳಗ್ಗೆ 9-00 ಗಂಟೆಗೆ ಕರ್ತವ್ಯಕ್ಕೆ ನಿಯೋಜನೆ ಮಾಡಿದ್ದರು. ನಾನು ಮೂವ್ ಮೆಂಟ್ ರಿಜಿಸ್ಟರ್ ನಲ್ಲಿ ಬರೆದಿಲ್ಲ ಡೈರಿಯಲ್ಲಿ ಬರೆಯಲಾಗಿದೆ. ನಾವು ಬೆಳಗ್ಗೆ 9-00 ರಿಂದ ರಾತ್ರಿ 9-00 ರವರೆಗೆ ಅಂದರೆ ರಿಪೋರ್ಟ್ ಕೊಡುವವರೆಗೆ ನಾವು ಕರ್ತವ್ಯದಲ್ಲಿ ನಿಯೋಜನೆಯಾಗಿರುತ್ತೇವೆ. ಘಟನೆಯ ಬಗ್ಗೆ ಯಾವುದೇ ದೂರು ಬಂದಿಲ್ಲ. ಆ ದಿನ ನಾನು ಹಾಗೂ ಚಾಸಾ-1 ಬೈಕ್ ನಲ್ಲಿ ಹೋಗಿದ್ದೆವು. ನಾವು ಸಮವಸ್ತ್ರದಲ್ಲಿದ್ದೆವು. ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಳಿ ಸುತ್ತಾ ಮುತ್ತಾ ಅಂಗಡಿಗಳು ಮನೆಗಳು ಇವೆ ಎಂದರೆ ಸರಿ. ನಾವು ಆರೋಪಿತರನ್ನು ಅರಸೀಕೆರೆ ಮೈಸೂರು ರಸ್ತೆಯಮೇಲೆ ಹಿಡಿದಿರುತ್ತೇವೆ. ಉತ್ತರ ದಕ್ಷಿಣಕ್ಕೆ ಅರಸೀಕೆರೆ ಮೈಸೂರು ರಸ್ತೆ, ಪೂರ್ವ ಪಶ್ಚಿಮಕ್ಕೆ ಕಂತೇನಹಳ್ಳಿ ವಿದ್ಯಾನಗರ ರಸ್ತೆ ಇರುತ್ತದೆ. ಮುಖ್ಯ ರಸ್ತೆಯ ಮೇಲೆ ಹಿಡಿದಿರುತ್ತೇವೆ. ಆರೋಪಿತರನ್ನು ಯಾವ ಜಾಗದಲ್ಲಿ ಹಿಡಿದಿದ್ದೇವೆ ಎಂದು ನಾನು ನನ್ನ ಹೇಳಿಕೆಯಲ್ಲಿ ನಿಖರವಾಗಿ ಹೇಳಿದ್ದೇನೆ. ಘಟನಾ ಸ್ಥಳದಲ್ಲಿ ನಾನು ಯಾವುದೇ ಮಹಜರ್ ಮಾಡಿಲ್ಲ. ಆರೋಪಿತರನ್ನು ಹಿಡಿದ ಬಗ್ಗೆ ಮೇಲಾಧಿಕಾರಿಗೆ ಹೇಳಲಿಲ್ಲ

ನೇರವಾಗಿ ಅವರ ಮುಂದೆ ಹಾಜರುಮಾಡಿದೆವು. ಮೇಲಾಧಿಕಾರಿಗೆ ಐ.ಓ. ತಿಳಿಸಿರುತ್ತಾರೆ. ಕೇಸಿಗೋಸ್ಕರ ಠಾಣೆಯಲ್ಲಿ ಸುಳ್ಳು ಮಹಜರ್ ನ್ನು ಮಾಡಲಾಗಿದೆ ಎಂದು ಹೇಳುವುದು ಸರಿಯಲ್ಲ. ನಾವು ಜಪ್ತು ಮಾಡಿದ ಗಂಧದ ತುಂಡುಗಳಲ್ಲಿ ಒಂದು 1 ಅಡಿ, 2 ನೇ 11 ಇಂಚು, 2 ತುಂಡುಗಳು ತಲಾ 13 ಇಂಚು, ಇನ್ನೊಂದು 14 ಇಂಚು, 9 ಇಂಚು, ಹಾಗೂ 7 ಇಂಚು ಇದ್ದವು. ಚೆಕ್ಕೆಗಳು ಇದ್ದವು. ಆ ದಿನ ಜಫ್ತಾದ ತುಂಡುಗಳ ಒಟ್ಟು ತೂಕ 4.2 ಕೆ.ಜಿ. ಹಾಗೂ ಚೆಕ್ಕೆಗಳ ತೂಕ 11.2 ಕೆ.ಜಿ. ಇತ್ತು. ಎಲ್ಲಾ ಒಟ್ಟು ತೂಕ 11 ಕೆ.ಜಿ.ಇತ್ತು. ಆ ದಿನ ಬೈಕ್ ನ್ನು ಸೀಜ್ ಮಾಡಿಲ್ಲ ಹಾಗೂ ಮಹಜರ್ ಮಾಡಿಲ್ಲ ಎನ್ನುವುದು ಸರಿಯಲ್ಲ. ಆ ಬಗ್ಗೆ ಹಾಜರುಮಾಡಿರುವ ಫೋಟೋಗಳು ಈ ಕೇಸಿಗಾಗಿ ಸೃಷ್ಟಿಮಾಡಲಾಗಿದೆ ಎನ್ನುವುದು ಸರಿಯಲ್ಲ. ಈ ಕೇಸಿಗೆ ಅನುಕೂಲ ಆಗಲಿ ಎಂದು ನನ್ನ ಹಿರಿಯ ಅಧಿಕಾರಿಗಳ ಮಾತನ್ನು ಕೇಳಿ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮುದ್ದೆ ಮಾಲುಗಳನ್ನು ಅರಣ್ಯ ಇಲಾಖೆಗೆ ಕೊಡಲಾಗಿದೆ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಅನಿತ ಜಿ. )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. ದಿಃ **13-12-2023.**